

# ಬಗೆಬಗೆ ವಿವಾದಗಳ ಹೊಗೆ!

ಚಿತ್ರರಂಗವೆಂದರೆ ವಿವಾದಗಳು ಸಾಮಾನ್ಯ. ಈ ವರ್ಷ ಚಿತ್ರರಂಗ ಭಾಗಶಃ ಅಷ್ಟೇ ತೆರೆದಿದ್ದರೂ ವಿವಾದಗಳ ದಿಡ್ಡಿಬಾಗಿಲೇನೂ ಮುಚ್ಚಿಕೊಂಡಿರಲಿಲ್ಲ. ಚಿತ್ರಮಂದಿರಗಳಲ್ಲಿ ಕೊಡಲಾಗದ ಮನರಂಜನೆಯನ್ನು ನಟರು ಸುದ್ದಿವಾಹಿನಿಗಳ ಮೂಲಕ ಕೊಡುತ್ತಿದ್ದಾರೇನೋ ಎಂದು ಅನುಮಾನ ಹುಟ್ಟಿಸುವ ಹಲವು ವಿವಾದಗಳು ಈ ವರ್ಷ ಘಟಿಸಿದವು.

## 'ಪೊಗರು' ಡ್ರಾಮಾ

ನಂದಕಿಶೋರ್ ನಿರ್ದೇಶನದ ಧ್ರುವ ಸರ್ಜಾ ನಟನೆಯ 'ಪೊಗರು' ಸಿನಿಮಾದಲ್ಲಿ ಬ್ರಾಹ್ಮಣರಿಗೆ ಅವಹೇಳನ ಮಾಡುವ ದೃಶ್ಯಗಳಿವೆ ಎಂಬ ಆರೋಪ ಕೇಳಿಬಂದಿದ್ದು ಈ ವರ್ಷದ ಮೊದಲ ದೊಡ್ಡ ವಿವಾದ. ಬ್ರಾಹ್ಮಣ ಸಂಘಟನೆಗಳು, ಮಠದ ಸ್ವಾಮೀಜಿಗಳು, ಧರ್ಮರಕ್ಷಣೆಯ ಹಣೆಪಟ್ಟಿ ಹೊತ್ತುಕೊಂಡವರು, ರಾಜಕಾರಣಿಗಳು ಎಲ್ಲರೂ ಈ ಬಗ್ಗೆ ಹೇಳಿಕೆ ಕೊಡುವಷ್ಟು ವಿವಾದ ಸುಳಿಯಾಗಿ ಬೆಳೆಯಿತು. ವಾಣಿಜ್ಯ ಮಂಡಳಿ ಈ ವಿವಾದಕ್ಕೆ ರಾಜಿ ಮಾಡಿಸುವ ಪ್ರಯತ್ನವನ್ನು ಮಾಡಿ ಅಲ್ಲೊಂದಿಷ್ಟು ಮೆಲೊಡ್ರಾಮಾ ನಡೆಯಿತು. ಕೊನೆಗೆ ಧ್ರುವ ಸರ್ಜಾ ಮತ್ತು ನಂದಕಿಶೋರ್ ಇಬ್ಬರೂ ಕ್ಷಮೆ ಕೇಳುವಲ್ಲಿ ವಿವಾದ ಕೊನೆಗೊಂಡಿತು.

## ದರ್ಶನ್ ವರ್ಷದ ವಿವಾದ

ವರ್ಷಕ್ಕೊಂದಾದರೂ ವಿವಾದದಲ್ಲಿ ಸಿಕ್ಕಿಕೊಳ್ಳುವುದು ದರ್ಶನ್ ವೃತ್ತಿಜೀವನದ ಭಾಗವೇ ಆದಂತಿದೆ. ಈ ವರ್ಷವೂ ಆ ಪದ್ಧತಿಯನ್ನು ಅವರು ತಪ್ಪಿಸಲಿಲ್ಲ. ದರ್ಶನ್ ಹೆಸರು ಬಳಸಿಕೊಂಡು ಕೋಟ್ಯಂತರ ರೂಪಾಯಿ ಹಣವನ್ನು ವಂಚಿಸಲಾಗಿದೆ ಎಂಬ ಸಣ್ಣ ಸುದ್ದಿಯಾಗಿ ಕಿಡಿಹೊತ್ತಿಸಿಕೊಂಡು, ಆ ವಿವಾದ ದಿನಕ್ಕೊಂದು ಸಿನಿಮೀಯ ತಿರುವು ಪಡೆದುಕೊಳ್ಳುತ್ತ ಬೆಳೆಯಿತು. ಕೊನೆಗೆ 'ರಾಬರ್ಟ್' ನಿರ್ಮಾಪಕ ಉಮಾಪತಿ ಅವರ ಕೊರಳಿಗೂ ಸುತ್ತಿಕೊಂಡು ದರ್ಶನ್, ಉಮಾಪತಿ ನಡುವಿನ ವೈಮನಸ್ಸಿಗೂ ಕಾರಣವಾಗಿ, ರಾಜ್ ಕುಟುಂಬದ ಒಂದು ಆಸ್ತಿಯ ಸುತ್ತಲೂ ಗಿರಕಿ ಹೊಡೆದು ಕೊನೆಗೆ ಇದ್ದಕ್ಕಿಂದ ಹಾಗೆಯೇ ಸದ್ದಡಗಿಸಿಕೊಂಡು ತಣ್ಣಗಾಯಿತು. 'ಇಪ್ಪತ್ತೈದು ಕೋಟಿ ಅಂದ್ರೆ ಸುಮ್ನೇನಾ? ಯಾರಾದ್ರೂ ಸುಮ್ಮನೆ ಬಿಡಲ್ಲ' ಎಂದು ಗುಡುಗಿದ್ದ ದರ್ಶನ್, ಈಗ ಕೃಷಿ ರಾಯಭಾರಿಯಾಗಿ ಬಿ.ಸಿ. ಪಾಟೀಲ್ ಜೊತೆಗೆ ಅಡ್ಡಾಡುತ್ತ ಆರಾಮಾಗಿದ್ದಾರೆ.

## 'ಕೋಟಿಗೊಬ್ಬ 3' ಬಿಡುಗಡೆಗೆ ತಡೆ

'ಕೋಟಿಗೊಬ್ಬ 3' ಅಕ್ಟೋಬರ್ 14ರಂದು ಬಿಡುಗಡೆಯಾಗಬೇಕಿತ್ತು. ಸುದೀಪ್ ನಟನೆಯ ಈ ಸಿನಿಮಾದ ನಿರ್ಮಾಪಕರು ಸೂರಪ್ಪ ಬಾಬು. ಬಿಡುಗಡೆಯ ದಿನ ಬೆಳಗ್ಗೆ ಆರು ಗಂಟೆಯ ಶೋಗೆ ಕಾದಿದ್ದ ಸುದೀಪ್ ಅಭಿಮಾನಿಗಳಿಗೆ ನಿರಾಸೆಯಾಗಿತ್ತು. ಸಿನಿಮಾ ಬಿಡುಗಡೆ ಆಗಿರಲೇ ಇಲ್ಲ. ಅಂದಿಡೀ ಸುದ್ದಿಗೆ ಗ್ರಾಸವಾದ ಸಿನಿಮಾ ಮರುದಿನ ಬಿಡುಗಡೆಗೊಂಡಿತು.

'ತಾಂತ್ರಿಕ ಕಾರಣ' ಎಂಬೆಲ್ಲ ಏನೇನೋ ಕಾರಣ ಕೊಟ್ಟು ತೇಪೆ ಹಚ್ಚಲು ಪ್ರಯತ್ನಿಸಿದರೂ ಬಿಡುಗಡೆಯ ತಡೆಗೆ ಕಾರಣಗಳು ಬೇರೆಯೇ ಇವೆ ಎಂಬುದು ಗಾಂಧಿನಗರ ಬಲ್ಲ ಜನರಿಗೆ ಗೊತ್ತಿತ್ತು. ಕೊನೆಗೆ ಸುದೀಪ್ ನೀಡಿದ 'ಇದರ ಹಿಂದೆ ಯಾರಿದ್ದಾರೆ ಎಂದು ಗೊತ್ತಿದೆ' ಎಂಬ ಹೇಳಿಕೆಯ ಮೂಲಕವೂ ಇದು ಜಾಹೀರಾಯಿತು. ನಿರ್ಮಾಪಕರು ಕೊಡಬೇಕಾದವರಿಗೆ ಹಣ ಕೊಟ್ಟಿಲ್ಲದಿರುವುದೂ ಈ ತೊಡಕಿಗೆ ಕಾರಣ ಎಂಬ ಮಾತುಗಳೂ ಕೇಳಿಬಂದವು. ಆದರೆ ಸ್ಪಷ್ಟ, ನಿರ್ದಿಷ್ಟ ಕಾರಣಗಳು ಕೊನೆಗೂ ಹೊರಗೆ ಬರಲಿಲ್ಲ.

## ಮಾದೇಶನ ಹಾಡಿಗೆ ಆಕ್ಷೇಪ

ರಾಜ್ ಶೆಟ್ಟಿ ನಿರ್ದೇಶನದ 'ಗರುಡ ಗಮನ ವೃಷಭ ವಾಹನ' ಸಿನಿಮಾದಲ್ಲಿ ಮಾದೇಶ್ವರನ ಹಾಡನ್ನು ಅಸಮಂಜಸವಾಗಿ ಬಳಸಿಕೊಳ್ಳಲಾಗಿದೆ, ಕೊಲೆಯಂಥ ಕ್ರೌರ್ಯದ ಸನ್ನಿವೇಶಕ್ಕೆ ಹಿನ್ನೆಲೆಯಾಗಿ ಅದನ್ನು ಬಳಸಿಕೊಂಡಿರುವುದು ಅಪಚಾರ ಎಂಬ ಚರ್ಚೆ ಮೊದಲು ಹುಟ್ಟಿಕೊಂಡಿದ್ದು ಸೋಷಿಯಲ್ ಮೀಡಿಯಾದಲ್ಲಿ. ನಂತರ ಅದು ಉಳಿದ ಮಾಧ್ಯಮಗಳಿಗೂ ವ್ಯಾಪಿಸಿ, ಸಾಲೂರು ಮಠದ ಸ್ವಾಮೀಜಿಗಳು ಒಂದು ಬಹಿರಂಗ ಪ್ರಕಟಣೆಯನ್ನು ಪ್ರಕಟಿಸುವವರೆಗೂ ಬೆಳೆಯಿತು. ಸಾಮಾನ್ಯವಾಗಿ ಎಲ್ಲ ವಿವಾದಗಳಲ್ಲಿಯೂ ಕೇಳಿಬರುವ 'ಕ್ಷಮೆ'ಯ ಆಗ್ರಹಕ್ಕಿಂತ ಭಿನ್ನವಾಗಿ, 'ಕ್ಷಮೆ ಎನ್ನುವುದು ಮನಸ್ಸಿಂದ ಬರಬೇಕು, ಒತ್ತಾಯದಿಂದಲ್ಲ' ಎಂದು ಹೇಳಿ, 'ಆ ಮಾದೇಶ್ವರ ಸಿನಿಮಾ ನಿರ್ದೇಶಕರನ್ನೂ ಹರಸಲಿ' ಎಂದು ಹೇಳಿದ್ದು ಒಂದು ವಿವಾದವನ್ನು ನಿರ್ವಹಿಸಬೇಕಾದ ರೀತಿಗೆ ಒಳ್ಳೆಯ ಮಾದರಿಯಾಗಿತ್ತು.

'ರಾಜಕುಮಾರ'ದಂಥ ಸೂಪರ್ ಹಿಟ್ ಸಿನಿಮಾ ಕೊಟ್ಟಿದ್ದ ಸಂತೋಷ್ ಆನಂದ್‌ರಾಮ್ ಮತ್ತು ಪುನೀತ್ ಕಾಂಬಿನೇಷನ್‌ನ ಮತ್ತೊಂದು ಸಿನಿಮಾ 'ಯುವರತ್ನ'ದ ಮೇಲೆ ನಿರೀಕ್ಷೆ ಹೆಚ್ಚಿರಲು ಕಾರಣಗಳು ಹಲವಿದ್ದವು. ಈ ಮೊದಲು ಬಿಡುಗಡೆಯಾಗಿದ್ದ 'ಪೊಗರು' ಮತ್ತು 'ರಾಬರ್ಟ್' ಸಿನಿಮಾಗಳು ಹರೆಯದ ಹುಡುಗರನ್ನು ಹೆಚ್ಚಾಗಿ ಚಿತ್ರಮಂದಿರಕ್ಕೆ ಕರೆತಂದಿದ್ದವು. ಆದರೆ 'ಕುಟುಂಬ ಪ್ರೇಕ್ಷಕ' ಇನ್ನೂ ಚಿತ್ರಮಂದಿರದ ಕಡೆ ಮುಖ ಮಾಡಿರಲಿಲ್ಲ. ಮಕ್ಕಳ ಕಲರವವೂ ಕೇಳಿಸಿರಲಿಲ್ಲ. ಪುನೀತ್ ಅಭಿಮಾನಿಗಳಲ್ಲಿ ಕುಟುಂಬ ಪ್ರೇಕ್ಷಕರ ಸಂಖ್ಯೆ ದೊಡ್ಡದು. ಅದರಲ್ಲಿಯೂ ಮಕ್ಕಳಿಗೆ ಪುನೀತ್ ಎಂದರೆ ಅಚ್ಚುಮೆಚ್ಚು. ತುಸು ಭಯ, ಅಷ್ಟೇ ಆಸೆಗಣ್ಣಿನಿಂದ ನೋಡುತ್ತಿದ್ದ ಆ ಪ್ರೇಕ್ಷಕವರ್ಗವನ್ನು ಚಿತ್ರಮಂದಿರಕ್ಕೆ ಕರೆತರುವ ಜವಾಬ್ದಾರಿ ಪುನೀತ್ ಮೇಲಿತ್ತು.

ಏಪ್ರಿಲ್ 1ರಂದು ಬಿಡುಗಡೆಯಾದ 'ಯುವರತ್ನ'ನಿಗೆ ಸಿಕ್ಕ ಓಪನಿಂಗ್ ಭರ್ಜರಿಯಾಗಿಯೇ ಇತ್ತು. ಏಕಪರದೆಯ ಚಿತ್ರಮಂದಿರಗಳಲ್ಲಿಯೂ ಸಾಯಂಕಾಲದ ಶೋಗಳಿಗೂ ಹಿರಿಯ ನಾಗರಿಕರು, ಮಕ್ಕಳು, ಹೆಣ್ಣುಮಕ್ಕಳೆಲ್ಲ ಟಿಕೆಟ್ ಸರತಿಯಲ್ಲಿ ನಿಂತಿರುವುದನ್ನು ನೋಡಲು ಸಿಗುವುದು ಪುನೀತ್ ಸಿನಿಮಾಗಳಿಗೆ ಮಾತ್ರ. ಅದು ಈ ಸಿನಿಮಾ ಆರಂಭದಲ್ಲಿಯೂ ನಿಜವೇ ಆಯಿತು. ಆದರೆ ಚಿತ್ರಮಂದಿರದ ಒಳಗಹೋದ ಪ್ರೇಕ್ಷಕರಿಗೆ ಎರಡೂ ಮುಕ್ಕಾಲು ತಾಸುಗಳ ಕಾಲ ಹಿಡಿದುನಿಲ್ಲಿಸುವಂಥ ಯಾವ ಅಂಶಗಳೂ ಸಿನಿಮಾದಲ್ಲಿ ಸಿಗಲಿಲ್ಲ. ಅದೇ ಸಮಯಕ್ಕೆ ಸರಿಯಾಗಿ ಕೊರೊನಾ ಪ್ರಕರಣಗಳು ಹೆಚ್ಚಾಗಿ ಸರ್ಕಾರ ಮತ್ತೆ ಚಿತ್ರಮಂದಿರಗಳಿಗೆ ಪ್ರೇಕ್ಷಕರ ಪ್ರವೇಶವನ್ನು ಶೇ. 50ಕ್ಕೆ ನಿಗದಿಪಡಿಸಿತು. ಇದು 'ಯುವರತ್ನ'ನ ಸೋಲಿಗೆ ಒಂದು ನೆಪವಾಗಿಯೂ ಒದಗಿಬಂತು. ಹೀಗಾಗಿ ಭರ್ಜರಿ ಸದ್ದಿನೊಟ್ಟಿಗೆ ಬಂದ ಪುನೀತ್ ಸಿನಿಮಾ ಕೆಲವೇ ದಿನಗಳಲ್ಲಿ 'ಅಮೆಜಾನ್ ಪ್ರೈಮ್'ಗೆ ಪ್ರವೇಶ ಪಡೆಯಿತು.

ಏಪ್ರಿಲ್ 16ರಕ್ಕೆ ರಿಲೀಸ್ ಆದ ಅಜಯ್‌ರಾವ್



'ಕೋಟಿಗೊಬ್ಬ 3' ಸಿನಿಮಾದಲ್ಲಿ ಸುದೀಪ್